(ಇಂದು ದಿನಾಂಕ 24-01-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎಂ.ಬಿ.ಎನ್. ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಗೆ ಸಂಬಂಧಿಸಿದಂತೆ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದರಲ್ಲಿ ನಮೂದಿಸಿರುವ ಮಜಕೂರುಗಳು ಸತ್ಯವಾಗಿದ್ದು, ಅದನ್ನು ಓದಿ ತಿಳಿದುಕೊಂಡು ನಂತರ ಅದಕ್ಕೆ ನನ್ನ ಸಹಿ ಹಾಕಿರುತ್ತೇನೆ.

ನಾನು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಸಲ್ಲಿಸಿದ್ದು ಅವುಗಳನ್ನು ಪುನಃ ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಈ ಕೆಳಕಂಡ ದಾಖಲಾತಿಗಳನ್ನು ನೋಡಿ ಗುರುತಿಸಿರುತ್ತಾರೆ.

1) ನಿ.ಪಿ.1- ಪ್ರ.ವ. ವರದಿಯ ದೃಢೀಕೃತ ನಕಲು

2) ನಿ.ಪಿ.2- ದೂರಿನ ದೃಢೀಕೃತ ನಕಲು

3) ನಿ.ಪಿ.3- ಅಪಘಾತ ಸ್ಥಳದ ಪಂಚನಾಮೆಯ ದೃಢೀಕೃತ ನಕಲು

4) ನಿ.ಪಿ.4- ಸ್ಥಳದ ನಕ್ಷೆಯ ದೃಢೀಕೃತ ನಕಲು

5) ನಿ.ಪಿ.5- ಸ್ಥಳದ ಫೋಟೊಗಳ ನಕಲು ಪ್ರತಿ (ಒಟ್ಟೂ 3 ಪುಟ)

6) ನಿ.ಪಿ.6- ಗಾಯದ ಪ್ರಮಾಣದ ನಕಲು ಪ್ರತಿ

7) ನಿ.ಪಿ.7- ದೋಷಾರೋಪಣಾ ಪಟ್ಟಿಯ ನಕಲು ಪ್ರತಿ

8) ನಿ.ಪಿ.8 ರಿಂದ 19 – ಕೆ.ಎಸ್. ಹೆಗಡೆ ಆಸ್ಪತ್ರೆಯ ಬಿಲ್ ಮತ್ತು ಪ್ರಿಸಕ್ರಿಪಶನ್‌ಗಳು

9) ನಿ.ಪಿ. 20 – ಕೆ.ಎಸ್. ಹೆಗಡೆ ಆಸ್ಪತ್ರೆಯ ಒಳರೋಗಿಯ ಕ್ಯಾಶ್ ಬಿಲ್

10) ನಿ.ಪಿ.21 ರಿಂದ 43 – ಕೆ.ಎಸ್. ಹೆಗಡೆ ಆಸ್ಪತ್ರೆಯ ಕ್ಯಾಶ್ ಬಿಲ್‌ಗಳು

11) ನಿ.ಪಿ.44 – ಆಸ್ಪತ್ರೆಯ ರಶೀದಿ

12) ನಿ.ಪಿ.45 –ಕೆ.ಎಸ್. ಹೆಗಡೆ ಆಸ್ಪತ್ರೆಯ ಒಳರೋಗಿಯ ಕ್ಯಾಶ್ ಬಿಲ್

13) ನಿ.ಪಿ.46 ಮತ್ತು 47 – ಕೆ.ಎಸ್. ಹೆಗಡೆ ಆಸ್ಪತ್ರೆಯ ಕ್ರೆಡಿಟ್ ಬಿಲ್‌ಗಳು

14) ನಿ.ಪಿ.48 – ರಶೀದಿ

15) ನಿ.ಪಿ.49– ಕೆ.ಎಸ್. ಹೆಗಡೆ ಆಸ್ಪತ್ರೆಯ ಒಳರೋಗಿಯ ಕ್ಯಾಶ್ ಬಿಲ್

16) ನಿ.ಪಿ.50 ಮತ್ತು 51 - ಓ.ಪಿ. ಸರ್ವಿಸ್ ಬಿಲ್‌ಗಳು

17) ನಿ.ಪಿ.52– ಆಧಾರ ಕಾರ್ಡನ ನೋಟರಿ ಪ್ರತಿ

ಸಾಕ್ಷಿ ವಿಚಾರಣೆ ಹಾಗೂ ದಾಖಲಾತಿಗಳ ಆಧಾರದ ಮೇಲೆ ಅರ್ಜಿಯಲ್ಲಿ ಕೇಳಿರುವಂತೆ ಆದೇಶ ಮಾಡಬೇಕಾಗಿ ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎ.ಜಿ. ಎಚ್. ವಕೀಲರಿಂದಃ**

ಅಪಘಾತವಾದಾಗ ನಾನು ಯಲ್ಲಾಪುರ ಪೇಟೆಯಿಂದ ಮನೆಗೆ ಬರುತ್ತಿದ್ದೆ. ಪೇಟೆಯಿಂದ ಮನೆ ಸುಮಾರು 15 ಕಿ.ಮೀ. ದೂರ ಇದೆ. ಅಪಘಾತ ಸುಮಾರು 12.00 ರಿಂದ 1.00 ಗಂಟೆಯ ಒಳಗೆ ಆಗಿತ್ತು. ಪೊಲೀಸರಿಗೆ ಯಾರು ಫಿರ್ಯಾದಿ ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ಅಪಘಾತವು ದಿನಾಂಕ 21-11-2023 ರಂದು ಆಗಿತ್ತು. ಪೊಲೀಸರಿಗೆ ದೂರು ಕೊಟ್ಟು ಪ್ರ.ವ. ವರದಿ ದಿನಾಂಕ 25-11-2023 ರಂದು ಆಗಿತ್ತು. ರವಿ ನಾಗರಾಜ ಆಚಾರಿ ಇವರ ಪರಿಚಯ ಇದೆ. ಅವರು ಪೊಲೀಸರಿಗೆ ದೂರು ಕೊಟ್ಟಿರಬಹುದು. ನಾನು ಬಿದ್ದಾಗ ಅವರೇ ನನಗೆ ಎದ್ದು ಸಹಾಯ ಮಾಡಿದ್ದರು. ಅಪಘಾತವಾದ ನಂತರ ಅಲ್ಲಿ ಬಹಳಷ್ಟು ಜನರು ಸೇರಿದ್ದರು ಎಂದರೆ ನನಗೆ ಗೊತ್ತಿಲ್ಲ. ಅಪಘಾತವು ರಾಷ್ಟ್ರೀಯ ಹೆದ್ದಾರಿಯಲ್ಲಿ ಮಾಗೋಡ ಕ್ರಾಸ್‌ನಲ್ಲಿ ಆಗಿತ್ತು. ನನಗೆ ಮೋಟಾರ್ ಸೈಕಲ್ ಸರಿಯಾಗಿ ಚಲಾಯಿಸಲು ಬರದೇ ಇರುವ ಕಾರಣ ನಾನೇ ಬಿದ್ದು ಪೆಟ್ಟು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಸಹಾಯವಾಗುವ ರೀತಿಯಲ್ಲಿ ರವಿ ಆಚಾರಿ ಎನ್ನುವವರು ಅಪಘಾತವಾದ 4 ದಿವಸಗಳ ನಂತರ ಒಂದು ಸುಳ್ಳು ದೂರು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಟ್ರಾಕ್ಟರ ಗಾಡಿ ಚಾಲಕನ ನಿರ್ಲಕ್ಷತನದಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಟ್ರಾಕ್ಟರ್ ಗಾಡಿ ಅಪಘಾತದಲ್ಲಿ ಭಾಗಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಟ್ರಾಕ್ಟರ್ ಚಾಲಕನ ವಿರುದ್ಧ ದಾಖಲಿಸಿದ ಕ್ರಿಮಿನಲ್ ಪ್ರಕರಣ ನಂತರ ಏನಾಯಿತು ಎಂದು ನನಗೆ ಗೊತ್ತಿಲ್ಲ. ನನಗೆ ಮೋಟಾರ್ ಸೈಕಲ್ ಚಲಾಯಿಸಲು ಯಾವುದೇ ಡಿ.ಎಲ್. ಇರಲಿಲ್ಲ ಹಾಗೂ ನಾನು ಆ ದಿವಸ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ನಾನೇ ನನ್ನ ಮೋಟಾರ್ ಸೈಕಲ್‌ನ ಮಾಲಿಕನಾಗಿರುತ್ತೇನೆ. ಅದಕ್ಕೆ ವಿಮೆ ಇತ್ತು. ನಾನು ನನ್ನ ವಿಮೆ ಕಂಪನಿಯಿಂದ ಯಾವುದೇ ಪರಿಹಾರ ಪಡೆದಿಲ್ಲ.

ನಾನು ಯಲ್ಲಾಪುರ ಆಸ್ಪತ್ರೆಯಲ್ಲಿ ಪ್ರಥಮವಾಗಿ ಚಿಕಿತ್ಸೆ ಪಡೆದಿದ್ದು ನಂತರ ಅಲ್ಲಿಂದ ಹುಬ್ಬಳ್ಳಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ನಂತರ ಅಲ್ಲಿಂದ ಹೆಚ್ಚಿನ ಚಿಕಿತ್ಸೆಗೆ ಕೆ.ಎಸ್. ಹೆಗಡೆ ಆಸ್ಪತ್ರೆ, ಮಂಗಳೂರಿನಲ್ಲಿ ದಾಖಲಾಗಿದ್ದೆ. ನಾನು ಉಪಚಾರ ಪಡೆದ ಬಗ್ಗೆ ಎಲ್ಲಾ ಆಸ್ಪತ್ರೆಯ ದಾಖಲಾತಿಗಳನ್ನು ಹಾಜರು ಮಾಡಿರುತ್ತೇನೆ. ಸುಮಾರು ಒಂದುವರೆ ಲಕ್ಷ ಮೆಡಿಕಲ್ ಖರ್ಚು ಮತ್ತು ಸುಮಾರು ರೂ. 30,000-00 ಸಾರಿಗೆ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈಗ 68 ವರ್ಷ ವಯಸ್ಸು. ನನಗೆ ಇಬ್ಬರು ಮಕ್ಕಳು. ಮಗ ಕೂಲಿ ಕೆಲಸ ಮಾಡುತ್ತಾನೆ. ನಾನು ಕಾರ್ಪೆಂಟರಿ ಕೆಲಸ ಮಾಡಿ ಮಾಸಿಕ ರೂ. 25,000-00 ಗಳಿಸುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ 3 ತಿಂಗಳು ಕೆಲಸ ಮಾಡಲು ಆಗದೇ ಆರ್ಥಿಕ ಲುಕ್ಸಾನು ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ವಯಸ್ಸಾದ ಕಾರಣ ನಾನು ಮನೆಯಲ್ಲೇ ಇರುತ್ತಿದ್ದು ಯಾವುದೇ ಕೆಲಸಕ್ಕೆ ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಪರಿಹಾರ ಹಣ ಪಡೆಯುವ ಉದ್ದೇಶದಿಂದ ಸುಳ್ಳು ದಾಖಲಾತಿಗಳನ್ನು ಹಾಜರು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತಪಡಿಸಿದ ವಾಹನ ಟ್ರಾಕ್ಟರ್ ವಾಹನ ಆಗಿರುತ್ತದೆ. ಟ್ರಾಕ್ಟರ್ ವಾಹನ ಚಾಲಕನಿಗೆ ಡಿ.ಎಲ್. ಇರಲಿಲ್ಲ ಹಾಗೂ ವಾಹನಕ್ಕೆ ಸರಿಯಾದ ದಾಖಲಾತಿಗಳು ಇರಲಿಲ್ಲ ಎಂದರೆ ಸರಿಯಲ್ಲ. ಎದುರುದಾರ ವಾಹನದವರು ವಿಮಾ ಪಾಲಿಸಿ ನಿಯಮಗಳನ್ನು ಉಲ್ಲಂಘಿಸಿದ್ದರಿಂದ ವಿಮಾ ಕಂಪನಿಯವರು ನನಗೆ ಯಾವುದೇ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ, ಕಾರವಾರ